ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, 20ನೇ ಪಟ್ಟಿಯಲ್ಲಿ ಇರುವ ಲಿಖಿತ ಮೂಲಕ ಉತ್ತರಿಸುವ ಒಟ್ಟು 130 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಮಂಡ್ಯ ಜಿಲ್ಲೆಯಲ್ಲಿ ಏತ ನೀರಾವರಿ ಕಾಮಗಾರಿಗಳು.

2180(2966)

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗಿದೆಯೇ.

ಆ) ಹಾಗಿದ್ದಲ್ಲಿ, ಈ ಯೋಜನೆಗಳ ಕಾಮಗಾರಿಯ ವಿವರವೇನು. (ತಾಲ್ಲೂಕುವಾರು ವಿವರ ನೀಡುವುದು)

ಇ) ಕಾಮಗಾರಿಗಳು ಯಾವ ಹಂತದಲ್ಲಿವೆ.

ಈ) ಕಾಮಗಾರಿಗಳು ಸಂಪೂರ್ಣಗೊಂಡು ಕಾರ್ಯಾರಂಭ ಮಾಡಿ ಸ್ಥಗಿತವಾಗಿರುವ ಏತ ನೀರಾವರಿಗಳು ಎಷ್ಟಿವೆ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಹೌದು.

ಆ) I. ಮದ್ದೂರು ತಾಲ್ಲೂಕು

ಅ. ಕದಲೂರು ಏತ ನೀರಾವರಿ ಯೋಜನೆ

ಆ. ಕೆಸ್ತೂರು ಕೆರೆಗೆ ಏತ ನೀರಾವರಿ ಯೋಜನೆ.

ಇ. ಅತಗೂರು ಮಾಚಹಳ್ಳಿ ಏತ ನೀರಾವರಿ ಯೋಜನೆ.

ಈ. ಅಂಕನಾಥಪುರ ಏತ ನೀರಾವರಿ ಯೋಜನೆ.

2. ಮಂಡ್ಯ ತಾಲ್ಲೂಕು

ಅ. ಹೆಮ್ಮಿಗೆ ಏತ ನೀರಾವರಿ ಯೋಜನೆ.

ಆ. ಪಣಕನಹಳ್ಳಿ ಏತ ನೀರಾವರಿ ಯೊಜನೆ.

3. ಮಳವಳ್ಳಿ ತಾಲ್ಲೂಕು

ಅ. ಸುರ್ಗಿತೋಪು ಏತನೀರಾವರಿ ಯೋಜನೆ.

ಆ. ಮಲ್ಲಿಕ್ಯಾತನಹಳ್ಳಿ ಏತನೀರಾವರಿ ಯೊಜನೆ.

ಇ. ಪೂರಿಗಾಲ ಬಳಿ ಮರಳುಗಾಡು ಏತ ನೀರಾವರಿ ಯೋಜನೆ.

ಈ. ನಂಜಾಪುರ ಏತ ನೀರಾವರಿ ಯೊಜನೆ.

ಉ. ರಾವಣಿ 2ನೇ ಹಂತದ ಏತ ನೀರಾವರಿ ಯೋಜನೆ.

ಇ) ಕಾಮಗಾರಿಗಳ ಹಂತವನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಈ) ಕಾಮಗಾರಿಗಳು ಸಂಪೂರ್ಣಗೊಂಡು ಕಾರ್ಯಾರಂಭ ಮಾಡಿರುವ ಒಟ್ಟು 20 ಏತ ನೀರಾವರಿ ಯೊಈಜನೆಗಳಲ್ಲಿ 14 ಏತ ನೀರಾವರಿ ಯೋಜನೆಗಳು ವಿವಿಧ ಕಾರಣಗಳಿಂದ ಸ್ಥಗಿತವಾಗಿರುತ್ತದೆ. ತಾಲ್ಲೂಕುವಾರು ವಿವರ ಅನುಬಂಧ-2ರಲ್ಲಿ ನೀಡಲಾಗಿದೆ.

ಅನುಬಂಧ - 1

ಕಾಮಗಾರಿಯ ಹಂತ (ತಾಲ್ಲೂಕುವಾರು)

1) **ಮದ್ದೂರು ತಾಲ್ಲೂಕು:**

ಅ) **ಕದಲೂರು ಏತ ನೀರಾವರಿ ಯೋಜನೆ:** ಸದರಿ ಏತ ನೀರಾವರಿ ಯೋಜನೆಯು ರೂ.46.90 ಲಕ್ಷಗಳಿಗೆ ಮಂಜೂರಾಗಿದ್ದು, ಯೋಜನೆಯ ಸಿವಿಲ್ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿ ಬಾವಿಯ ಮತ್ತು ಇನ್‌ಟೇಕ್ ಪೈಪ್ ಮಾರ್ಗದ ಮಣ್ಣಿನ ಅಗೆತದ ಕಾಮಗಾರಿಯನ್ನು ಮಾಡಿ ಮುಗಿಸಿರುತ್ತಾರೆ. ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯಿಂದ 500 ಎಕರೆ ಅರೆ ನೀರಾವರಿ ಬೆಳೆಗಳಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ.

ಆ) **ಕೆಸ್ತೂರು ಕೆರೆಗೆ ಏತ ನೀರಾವರಿ ಯೋಜನೆ:** ಸದರಿ ಏತ ನೀರಾವರಿ ಯೋಜನೆಯು ರೂ.41.70 ಲಕ್ಷಗಳಿಗೆ ಮಂಜೂರಾಗಿದ್ದು, ಯೋಜನೆಯ ಸಿವಿಲ್ ಕಾಮಗಾರಿಗೆ 2 ಬಾರಿ ಟೆಂಡರ್ ಕರೆದಿದ್ದು, ಯಾವ ಗುತ್ತಿಗೆದಾರರು ಮುಂದೆ ಬಂದಿರುವುದಿಲ್ಲ. 3ನೇ ಬಾರಿ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯಿಂದ ತೊಂದರೆಗೊಳಾಗಾದ ಕೆಸ್ತೂರು ಕೆರೆಯ 230 ಎಕರೆಗಳಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ.

ಇ) **ಅತಗೂರು ಮಾಚಹಳ್ಳಿ ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ.25.50 ಲಕ್ಷಗಳಿಗೆ ಕಾವೇರಿ ಏತ ನೀರಾವರಿ ನಿಗಮದಿಂದ ಮಂಜೂರಾಗಿದ್ದು, ಭಾಗಶಃ ಕಾಮಗಾರಿಗಳನ್ನು ಏತ ನೀರಾವರಿ ನಿಗಮದವರು ಮಾಡಿರುತ್ತಾರೆ. ಈ ಯೋಜನೆಯ ಏರು ಕೊಳವೆ ಮಾರ್ಗದ ಭಾಗಶಃ ಕಾಮಗಾರಿ, ಬಾವಿ ಮತ್ತು ಇನ್‌ಟೇಕ್ ಪೈಪ್‌ಲೈನಿನ ಮಣ್ಣಿನ ಅಗೆತದ ಕಾಮಗಾರಿ ಮತ್ತು ಮೇಲ್ಮಟ್ಟದ ತೊಟ್ಟಿಯ ಕಾಮಗಾರಿ ಮುಗಿದಿರುತ್ತದೆ. ಬಾಕಿ ಕೆಲಸದ ಕಾಮಗಾರಿಗಳಿಗೆ ಹಲವು ಬಾರಿ ಟೆಂಡರ್ ಕರೆದರೂ ಯಾವ ಗುತ್ತಿಗೆದಾರರಿಂದಲೂ ಪ್ರತಿಕ್ರಿಯೆ ಬಾರದ ಕಾರಣ ನೇರ ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಈ ಯೋಜನೆಯಿಂದ 400 ಎಕರೆಗೆ ನೀರೊದಗಿಸಲು ಉದ್ದೇಶಿಸಲಾಗಿದೆ.

ಈ) **ಅಂಕನಾಥಪುರ ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ.9.86 ಲಕ್ಷಗಳಿಗೆ ಮಂಜೂರಾಗಿದ್ದು ಯೋಜನೆಯ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಕಾಲುವೆಗಳಿಗೆ ಲೈನಿಂಗ್ ಮಾಡುವ ಕಾಮಗಾರಿ ಬಾಕಿ ಇರುತ್ತದೆ. ಈ ಯೋಜನೆಯಿಂದ 513 ಎಕರೆ ಅರೆ ನೀರಾವರಿ ಬೆಳೆಗಳಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ.

2) **ಮಂಡ್ಯ ತಾಲ್ಲೂಕು**

ಅ) **ಹೆಮ್ಮಿಗೆ ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ. 33.00 ಲಕ್ಷಗಳಿಗೆ ಮಂಜೂರಾಗಿದ್ದು, ಯೋಜನೆಯ ಸಿವಿಲ್ ಕಾಮಗಾರಿಗಳನ್ನು ನೇರ ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆಯ ಏರು ಕೊಳವೆಯ ಮಾರ್ಗದ ಅಗೆತದ ಕಾಮಗಾರಿ ಮುಗಿದಿದ್ದು, ಪೈಪ್ ಜಾಯಿಂಟ್ ಕಾಮಗಾರಿ ಪ್ರಗತಿಯಲ್ಲಿದೆ. ಮೇಲ್ಕಟ್ಟದ ತೊಟ್ಟಿ ಮತ್ತು ಬಾವಿಯ ಮಣ್ಣಿನ ಅಗೆತದ ಕಾಮಗಾರಿ ಪ್ರಗತಿಯಲ್ಲಿದೆ. ಈ ಯೋಜನೆಯಿಂದ 320 ಎಕರೆ ಅಚ್ಚುಕಟ್ಟಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ.

ಆ) **ಹಣಕನಹಳ್ಳಿ ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ. 28.00 ಲಕ್ಷಗಳಿಗೆ ಮಂಜೂರಾಗಿದ್ದು, ಈ ಯೋಜನೆಯಿಂದ 340 ಎಕರೆಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

3) **ಮಳವಳ್ಳಿ ತಾಲ್ಲೂಕು:**

ಅ) **ಸುರ್ಗಿತೋಪು ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ. 47. 80 ಲಕ್ಷಗಳಿಗೆ ಮಂಜೂರಾಗಿದ್ದು, ಈ ಯೋಜನೆಯಿಂದ 1750 ಎಕರೆ ಜಮೀನಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಲ್ಲಿ ಇನ್‌ಟೇಕ್ ಕಾಮಗಾರಿಗಳು, ಜಾಕ್‌ವೆಲ್ ಕಂ ಪಂಪ್‌ಹೌಸ್ ಮತ್ತು ನಾಲೆಗಳ ಕಾಮಗಾರಿಗಳು ಭಾಗಶಃ ಪೂರ್ಣಗೊಂಡಿದ್ದು, ಏರು ಕೊಳವೆಯ ಕಾಮಗಾರಿಯು ಟೆಂಡರ್ ರೀತ್ಯ ಪ್ರಗತಿಯಲ್ಲಿದೆ. ಸದರಿ ಯೋಜನೆಗೆ ವಿದ್ಯುಚ್ಚಕ್ತಿಯನ್ನು ಪಡೆಯಲು ಅಂದಾಜನ್ನು ತಯಾರಿಸಿ, ವಿದ್ಯುತ್ ಪ್ರಸಾರ ನಿಗಮಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ಯೋಜನೆಗೆ ಬೇಕಾಗಿರುವ ಯಂತ್ರೋಪಕರಣಗಳು ಹಾಗೂ ಟ್ರಾನ್ಸ್‌ಫಾರ್ಮರ್‌ಗಳನ್ನು ಗುತ್ತಿಗೆದಾರರು ಸರಬರಾಜು ಮಾಡಿರುತ್ತಾರೆ.

ಆ) **ಮಲ್ಲಿಕ್ಕಾತನಹಳ್ಳಿ ಏತ ನೀರಾವರಿ ಯೋಜನೆ:** ಈ ಯೋಜನೆಯು 29.28 ಲಕ್ಷ ರೂ.ಗಳಿಗೆ ಕಾವೇರಿ ಏತ ನೀರಾವರಿ ನಿಗಮ, ಮೈಸೂರುರವರಿಂದ ಮಂಜೂರಾಗಿದ್ದು, 387 ಎಕರೆ ಜಮೀನಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಸದರಿ ಏತ ನೀರಾವರಿ ಯೋಜನೆಯಲ್ಲಿ ಇನ್‌ಟೇಕ್ ಕಾಮಗಾರಿಗಳು ಜಾಕ್‌ವೆಲ್ ಕಂ ಪಂಪ್‌ಹೌಸ್ ಏರು ಕೊಳವೆ ಹಾಗೂ ಎಡದಂಡೆ ಮತ್ತು ಬಲದಂಡೆ ನಾಲೆಗಳು ಪೂರ್ಣಗೊಂಡಿರುತ್ತದೆ. ಸದರಿ ಏತ ನೀರಾವರಿ ಯೋಜನೆಗೆ ಯಂತ್ರೋಪಕರಣಗಳು ಬಂದಿದ್ದು, ಇವುಗಳನ್ನು ಅಳವಡಿಸಲಾಗುತ್ತಿದೆ. ಸದರಿ ಯೋಜನೆಗೆ ವಿದ್ಯುತ್‌ನ್ನು ತಡೆಯಲು ಅಂದಾಜನ್ನು ತಯಾರಿಸಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಇ) **ಪೂರಿಗಾಲ ಮರಳುಗಾಡು ಏತ ನೀರಾವರಿ ಯೋಜನೆ:** ಈ ಯೋಜನೆಯು 21.80 ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಲಾಗಿದೆ. ಸದರಿ ಯೋಜನೆಯಿಂದ 125 ಎಕರೆ ಜಮೀನಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಸದರಿ ಏತ ನೀರಾವರಿ ಯೋಜನೆಯಲ್ಲಿ ಇನ್ ಕಾಮಗಾರಿ, ವಿತರಣಾ ತೊಟ್ಟಿ ಪೂರ್ಣಗೊಂಡಿರುತ್ತವೆ. ಜಾಕ್‌ವೆಲ್ ಮತ್ತು ಪಂಪ್‌ಹೌಸ್ ಆರ್.ಸಿ.ಸಿ. ಸ್ಟೀನಿಂಗ್ ಭೂಮಿಯ ಮಟ್ಟದವರೆಗೂ ಬಂದಿರುತ್ತದೆ. ಸದರಿ ಯೋಜನೆಯಲ್ಲಿ ಕಾಮಗಾರಿಯೂ ಪ್ರಗತಿಯಲ್ಲಿದೆ. ಯಂತ್ರೋಪಕರಣಗಳನ್ನು ಅಳವಡಿಸಲು ಟೆಂಡರ್‌ನ್ನು ಕರೆಯಲಾಗಿದೆ.

ಈ) **ಸಂಜಾಪುರ ಏತ ನೀರಾವರಿ ಯೋಜನೆ:** ಈ ಯೋಜನೆಯನ್ನು ರೂ.25.00 ಲಕ್ಷಗಳಿಗೆ ಕಾವೇರಿ ಏತ ನೀರಾವರಿ ಯೋಜನೆ, ಮೈಸೂರುರವರಿಂದ ಮಂಜೂರಾಗಿದ್ದು, 400 ಎಕರೆ ಜಮೀನಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಸದರಿ ಏತ ನೀರಾವರಿ ಯೋಜನೆಯಲ್ಲಿ ಇನ್‌ಟೇಕ್ ಕಾಮಗಾರಿಗಳು ಜಾಕ್‌ವೆಲ್ ಕಂ ಪಂಪ್‌ಹೌಸ್ ಮತ್ತು ವಿತರಣಾ ತೊಟ್ಟಿಯೂ ಪೂರ್ಣಗೊಂಡಿರುತ್ತದೆ. ಏರು ಕೊಳವೆಯನ್ನು ಅಳವಡಿಸಲು ಪ್ರೆಶರ್ ಪೈಪ್‌ಗಳು ಸರಬರಾಜು ಆಗಿರುತ್ತದೆ. ಸದರಿ ಯೋಜನೆಯಲ್ಲಿ ಉಳಿಕೆ ಕೆಲಸಕ್ಕೆ ಟೆಂಡರ್ ಕರೆಯಬೇಕಾಗಿದೆ.

ಉ) **ರಾವಣಿ 2ನೇ ಹಂತದ ಏತ ನೀರಾವರಿ ಯೋಜನೆ:** ಈ ಯೋಜನೆಯು ರೂ.9.90 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದ್ದು, 370 ಎಕರೆ ಜಮೀನಿಗೆ ನೀರೊದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ವಿದ್ಯುತ್ ಸಂಪರ್ಕವನ್ನು ಪಡೆಯಬೇಕಾಗಿದೆ.

ಅನುಬಂಧ-2

ಅ) ಮದ್ದೂರು ತಾಲ್ಲೂಕು:

1) ಬ್ಯಾಲದಕೆರೆ ಏತ ನೀರಾವರಿ ಯೋಜನೆ 2) ಹೆಬ್ಬೆರಳು ಏತ ನೀರಾವರಿ ಯೋಜನೆ 3) ನವಿಲೆ ಏತ ನೀರಾವರಿ ಯೋಜನೆ	ಈ ಯೋಜನೆಗಳಿಂದ 1996-97ನೇ ಸಾಲಿನವರೆವಿಗೂ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರೊದಗಿಸಲಾಗುತ್ತಿತ್ತು ಶಿಂಷಾ ನದಿಯಲ್ಲಿ 1995-96ನೇ ಸಾಲಿನಿಂದಲೂ ಭಾರಿ ಪ್ರಮಾಣದಲ್ಲಿ ಮರಳು ತೆಗೆಯುತ್ತಿರುವುದರಿಂದ ಯೋಜನೆಗಳ ಇನ್‌ಟೇಕ್ ಪೈಪ್‌ಲೈನ್ ಮಟ್ಟಕ್ಕಿಂತ ನದಿಯ ತಳಮಟ್ಟವು ಸಾಕಷ್ಟು ಕೆಳಗಿಳಿದಿರುವುದರಿಂದ ನದಿಯಲ್ಲಿ ನೀರಿದ್ದರೂ ಸಹ ಇನ್‌ಟೇಕ್ ಪೈಪ್ ಮೂಲಕ ಜಾಕ್‌ವೆಲ್‌ಗಳಿಗೆ ನೀರು ಬಾರದಿದ್ದ ಕಾರಣ ಈ ಯೋಜನೆಗಳಿಗೆ ನೀರೊದಗಿಸಲು ಸಾಧ್ಯವಾಗುತ್ತಿಲ್ಲ.
4) ಕಾಡುಕೊತ್ತನಹಳ್ಳಿ ಏತ ನೀರಾವರಿ ಯೋಜನೆ	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ರೂ. 72000-00ಗಳ ವಿದ್ಯುಚ್ಛಕ್ತಿ ಬಾಕಿ ಬಿಲ್ ಪಾವತಿಸದ ಕಾರಣ ಕೆ.ಇ.ಬಿ.ರವರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ.

ಆ) ಕೆ.ಆರ್.ಪೇಟೆ ತಾಲ್ಲೂಕು:

1) ಗೂಡೇಹೊಸಹಳ್ಳಿ 1ನೇ ಮತ್ತು 2ನೇ ಹಂತದ ಏತ ನೀರಾವರಿ ಯೋಜನೆ 2) ಚಿಕ್ಕ ಮಂದಗೆರೆ ಏತ ನೀರಾವರಿ ಯೋಜನೆ 3) ಮಂದಗೆರೆ ಏತ ನೀರಾವರಿ ಯೋಜನೆ 4) ಗದ್ದೆ ಹೊಸೂರು ಏತ ನೀರಾವರಿ ಯೋಜನೆ 5) ಮಲ್ಲೇನಹಳ್ಳಿ ಏತ ನೀರಾವರಿ ಯೋಜನೆ	ಸದರಿ ಏತ ನೀರಾವರಿ ಯೋಜನೆಗಳಿಗೆ ವಿದ್ಯುಚ್ಛಕ್ತಿ ಬಾಕಿ ಬಿಲ್ ಪಾವತಿಸಿದ ಕಾರಣ ಕೆ.ಇ.ಬಿ.ರವರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ಆದುದರಿಂದ ಈ ಯೋಜನೆಗಳು ಸ್ಥಗಿತಗೊಂಡಿರುತ್ತದೆ. ಈ ಎಲ್ಲಾ ಯೋಜನೆಗಳ ಒಟ್ಟು ಬಾಕಿ ಬಿಲ್ಲುಗಳ ಮೊತ್ತ ರೂ. 1065933 ಆಗಿರುತ್ತದೆ.

6) ನಾಟರಹಳ್ಳಿ ಏತ ನೀರಾವರಿ ಯೋಜನೆ
7) ಬಿ.ಬಿ.ಕಾವಲ್ ಏತನೀರಾವರಿ ಯೋಜನೆ
8) ವಿಠಲಾಪುರ ಏತ ನೀರಾವರಿ ಯೋಜನೆ

ಇ) ಶ್ರೀರಂಗಪಟ್ಟಣ ತಾಲ್ಲೂಕು:

1) ಕರೀಘಟ್ಟ ಏತ ನೀರಾವರಿ ಒಂದು ಮತ್ತು ಎರಡನೇ ಹಂತ — ವಿದ್ಯುಚ್ಛಕ್ತಿಯ ಬಿಲ್ ಪಾವತಿ ಮಾಡದೇ ಇರುವುದರಿಂದ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಈ ಯೋಜನೆಯ ಒಟ್ಟು ವಿದ್ಯುತ್ ಬಾಕಿ ಬಿಲ್ಲುಗಳ ಮೊತ್ತ ರೂ. 3138368-00 ಆಗಿರುತ್ತದೆ.

ಈ) ಮಂಡ್ಯ ತಾಲ್ಲೂಕು:

1) ಸಿದ್ದಯ್ಯನ ಕೊಪ್ಪಲು ಏತ ನೀರಾವರಿ ಯೋಜನೆ — ಅಚ್ಚುಕಟ್ಟಿಗೆ ನೀರೊದಗಿಸಲಾಗುತ್ತಿದೆ.

ಉ) ಪಾಂಡವಪುರ ತಾಲ್ಲೂಕು:

1) ಸೀತಾಪುರ ಏತ ನೀರಾವರಿ ಯೋಜನೆ — ಅಚ್ಚುಕಟ್ಟಿಗೆ ನೀರೊದಗಿಸಲಾಗುತ್ತಿದೆ.

ಊ) ಮಳವಳ್ಳಿ ತಾಲ್ಲೂಕು:

1) ರಾವಣಿ ಏತ ನೀರಾವರಿ ಯೋಜನೆ (1ನೇ ಹಂತ)
2) ಟಿ.ಕೆ.ಹಳ್ಳಿ ಏತ ನೀರಾವರಿ ಯೋಜನೆ (ಮಾರಗೊಂಡನಹಳ್ಳಿ)
3) ಮಡಳ್ಳಿ ಏತ ನೀರಾವರಿ ಯೋಜನೆ
4) ಗಾಣಾಳು ಏತ ನೀರಾವರಿ ಯೋಜನೆ

— ಸದರಿ ಏತ ನೀರಾವರಿ ಯೋಜನೆಗಳು ನಿರ್ವಹಣೆಯಲ್ಲಿದ್ದು, ಅಚ್ಚುಕಟ್ಟಿನ ಪ್ರದೇಶಗಳಿಗೆ ನೀರೊದಗಿಸಲಾಗುತ್ತಿದೆ.

5) ಹೊಳಕಲ್‌ಮಡು ಏತ ನೀರಾವರಿ ಯೋಜನೆ	ಸದರಿ ಯೋಜನೆಯ ಬಾಬ್ತು ವಿದ್ಯುಚ್ಚಕ್ತಿಯ ಬಾಕಿ ಬಿಲ್ಲು ಪಾವತಿಸದ ಕಾರಣ ವಿದ್ಯುಚ್ಛಕ್ತಿಯ ನಿಗಮದಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ.